

## ಜೇಡ ಹೆಣೆದ ಬಲೆ

ಮನೆ, ನಮ್ಮ ಸುತ್ತಮುತ್ತಲಿನ ಪರಿಸರ ಹೀಗೆ ಎಲ್ಲೆಂದರಲ್ಲಿ ಜೇಡಗಳು ಬಲೆ ಕಟ್ಟುತ್ತವೆ. ತಮ್ಮ ಹಸಿವನ್ನು ನೀಗಿಸಿಕೊಳ್ಳುವ ಉದ್ದೇಶದಿಂದ ಪತಂಗ, ಕೀಟಗಳನ್ನು ಹಿಡಿಯಲೆಂದು ಬಲೆ ನಿರ್ಮಿಸಿ ಒಂದು ಮೂಲೆಯಲ್ಲಿ ಹೊಂಚು ಹಾಕಿ ಕುಳಿತಿರುತ್ತವೆ. ತನ್ನ ಬಾಯಿಯ ರಸದಿಂದಲೇ ಅಂದವಾಗಿ ಗೂಡನ್ನು ನಿರ್ಮಿಸುವ ಜೇಡದ ಚಾಕಚಕ್ಯತೆಗೆ ಎಂಥವರೂ ಮನಸೋಲಲೇಬೇಕು. ಸುಮಾರು ಎರಡು ತಾಸುಗಳಲ್ಲಿ ಜೇಡ ಬಲೆಯನ್ನು ನಿರ್ಮಿಸುತ್ತದೆ. ಮಳೆಗಾಲದಲ್ಲಿ ಜೋರಾಗಿ ಗಾಳಿ ಬೀಸುತ್ತಿದ್ದಂತೆ ಜೇಡ ತನ್ನ ಬಲೆಯ ರಕ್ಷಣೆಗೆ ಧಾವಿಸುವ ಅಪರೂಪದ ದೃಶ್ಯವೇ ಈ ಚಿತ್ರ.

–ಚಂದ್ರಹಾಸ್ ಚಾರ್ಮಾಡಿ, ಬೆಳ್ತಂಗಡಿ



## ಬಾಲ್ಯ ನೆನಪಿಸುವ ನಾಣ್ಯ

ಈ ಚಿತ್ರದಲ್ಲಿರುವ ನಾಣ್ಯಗಳನ್ನು ನೋಡಿದಾಕ್ಷಣ ನಮ್ಮ ನೆನಪು ಕೆಲವು ವರ್ಷಗಳ ಹಿಂದಕ್ಕೆ ಓಡುತ್ತದೆ. ಸುಮಾರು 20–30 ವರ್ಷಗಳ ಹಿಂದೆ ಈ ನಾಣ್ಯಗಳ ಚಲಾವಣೆಯ ಭರಾಟೆ ಜೋರಾಗಿತ್ತು. ಆಗಿನ ದಿನನಿತ್ಯದ ಬದುಕಿನ ವ್ಯವಹಾರದ ಲೆಕ್ಕಾಚಾರ ಬಹುತೇಕ ಈ ಪೈಸೆಗಳಿಗೆ ಸೀಮಿತವಾಗಿರುತ್ತಿತ್ತು. ಹೋಟೆಲುಗಳಿಗೆ ಹೋದರೆ ಆಗ ಹತ್ತು ಪೈಸೆಗೆ ಒಂದು ಟೀ/ಕಾಫಿ, 25 ಪೈಸೆಗೆ ದೋಸೆ ಮುಂತಾದ ತಿಂಡಿಗಳು ಸಿಗುತ್ತಿದ್ದವು ಅನ್ನೋದೆ ಆಶ್ಚರ್ಯ.

ದಿನನಿತ್ಯದ ಬದುಕಿಗೆ ಬೇಕಾಗುವ ಬಹುತೇಕ ಎಲ್ಲಾ ಸಾಮಾನು ಸರಂಜಾಮುಗಳೂ ಈ ಚಿಲ್ಲರೆ ಕಾಸುಗಳಲ್ಲೇ ನಮಗೆ ಸಿಕ್ಕಿಬಿಡುತ್ತಿದ್ದವು. ಅಂದರೆ ಆಗ ಆ ಚಿಲ್ಲರೆ ಕಾಸಿನ ಸಂಪಾದನೆಗೂ ಅಷ್ಟೇ ಕಷ್ಟವಿತ್ತು. 100 ರೂಪಾಯಿ ಒಬ್ಬರ ಬಳಿ ಇತ್ತೆಂದರೆ ಅವರೇ ದೊಡ್ಡ ಸಾಹುಕಾರ. 1000 ರೂಪಾಯಿ ಉಳ್ಳವರು ಎಲ್ಲೋ ಅಪರೂಪಕ್ಕೆ ಒಬ್ಬೊಬ್ಬರು ಸಿಗುತ್ತಿದ್ದರು. ಈಗಿನಂತೆ ಲಕ್ಷ, ಕೋಟಿಗಳ ಲೆಕ್ಕ ಆಗ ಕನಸಿನಲ್ಲೂ ಜನ ಕಾಣಲು ಸಾಧ್ಯವಿರಲಿಲ್ಲ. ಆದರೆ ಈಗ ಕಾಲ ಹೇಗೆ ಬದಲಾಗಿದೆಯೆಂದರೆ ಲಕ್ಷ, ಕೋಟಿಗಳಿಗೂ ಬೆಲೆ ಇಲ್ಲದ ಧಾವಂತದಲ್ಲಿ ನಮ್ಮ ಬದುಕು ನಾಗಾಲೋಟದಿಂದ ಓಡುತ್ತಿದೆ. ಈಗಾಗಲೇ ಕಣ್ಮರೆಯ ಹಂತಕ್ಕೆ ತಲುಪಿರುವ ಈ ನಾಣ್ಯಗಳು ನಮ್ಮ ಮುಂದಿನ ಜನಾಂಗಕ್ಕೆ ದಂತಕತೆಯಾಗಿ ಹೋದರೆ ಅಚ್ಚರಿ ಏನಿಲ್ಲ.

–ಚಾವಲ್ಮನೆ ಸುರೇಶ್ ನಾಯಕ್, ಕೊಪ್ಪ

## ಪಾಂಚ್ ಕಿ, ದಸ್ ಕಿ ಚಾಯ್

ಸಾಮಾನ್ಯವಾಗಿ ನಾವು ಬೆಳಿಗ್ಗೆ ಎದ್ದೊಡನೆ ಟೀ ಅಥವಾ ಕಾಫಿ ಕುಡಿಯದಿದ್ದರೂ ಬ್ರೇಕ್ ಫಾಸ್ಟ್ ಸಮಯದಲ್ಲಿ ದೋಸೆ, ಇಡ್ಲಿ, ವಡಾ, ಉಪ್ಪಿಟ್ಟು ಉಪಾಹಾರದ ನಂತರ ಬೇಡ ಅನಿಸಿದರೂ ಒಂದು ಕಪ್ ಚಹಾ ಕುಡಿಯಲು ಮನಸ್ಸಾಗುತ್ತದೆ. ಬಂಧುಗಳ ಭೇಟಿಗೆ ಮುಂಬೈಗೆ ಹೋಗಿದ್ದೆ. ಅಲ್ಲಿ ಉಪಾಹಾರದ ನಂತರ ಚಹಾ ಕುಡಿಯುವ ಮನಸಾಯಿತು. ಅಷ್ಟರಲ್ಲಿ 'ಚಾಯ್, ಚಾಯ್' ಎಂದು ಕೂಗುತ್ತಾ ಒಬ್ಬ ಹುಡುಗ ಬಂದ.

ಬಿಹಾರದ ಆ ಹುಡುಗನ ಹೆಸರು ಅರ್ಮಾನ್. ವಯಸ್ಸು 12. ಅವನನ್ನು ಕರೆದು ಚಹಾ ಕೇಳಿದ. ಅವನು, 'ಪಾಂಚ್ ಕಿ... ಯಾ... ದಸ್ ಕಿ...'? ಎಂದ. ಅದನ್ನು ಕೇಳಿ ಆಶ್ಚರ್ಯವಾಯ್ತು. ಶ್ರೀಮಂತಿಕೆಯ ಮುಂಬೈಯಲ್ಲಿ ₹5, ₹10ಕ್ಕೆಲ್ಲ ಚಹಾ ಸಿಗುತ್ತೆ ಅನ್ನೋದೇ ಆಶ್ಚರ್ಯದ ಸಂಗತಿ. ಆ ಚಹಾ ರುಚಿ ಹೇಗಿರುತ್ತೆ ಎಂದು ನೋಡಲು, 'ದಸ್ ಕಿ ದೆ ದೋ' ಎಂದೆ. ಪೇಪರ್ ಕಪ್‌ನಲ್ಲಿ ಅವನು ಚಹಾ ನೀಡಿದ. ಕುಡಿಯುತ್ತಿದ್ದಂತೆ ಖುಷಿಯಾಯ್ತು. ಏಲಕ್ಕಿ, ಶುಂಠಿ ಘಮ ಮೂಗಿಗೆ ಬಡಿಯುತ್ತಿತ್ತು. ನಾಲ್ಕೈದು ಗುಟುಕು ಹೀರಿ 'ಚಹಾ ಜಬರ್ದಸ್ತ್ ಹೈ' ಎಂದೆ. ಕೊಟ್ಟ ಕಾಸಿನ ಬೆಲೆಗಿಂತ ಚಹಾದ ರುಚಿಯೇ ಮೇಲುಗೈ ಸಾಧಿಸಿತು. ಮುಂಬೈ ನಗರ ವೀಕ್ಷಣೆಗೆ ಹೋದಾಗ ಅಲ್ಲಿನ ಗೈಡ್ 'ತಾಜ್ ಹೋಟೆಲ್‌ನಲ್ಲಿ ಒಂದು ಚಾಯ್ ಬೆಲೆ ₹500' ಎಂದಿದ್ದ ಮಾತು ನೆನಪಾಯಿತು. ಇಲ್ಲಿಯೂ ನನ್ನಂತಹ ಸಾಮಾನ್ಯರಿಗೂ 'ಪಾಂಚ್ ಕಿ, ದಸ್ ಕಿ ಚಾಯ್' ಕೊಟ್ಟ ಮುಂಬೈಗೆ ಧನ್ಯವಾದ.

–ರಘುನಾಥರಾವ್ ರಾವ್ ತಾಪ್ಸೆ, ದಾವಣಗೆರೆ

